**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 161/ 2017**

**ಚಾಸಾ ಃ- 08 / ಪ್ರಾಸಾ ಃ- 06**

| | |
|---|---|
| ಹೆಸರು | ಲೋಕೇಶ್ |
| ತಂದೆ ಹೆಸರು | ಬೊಮ್ಮಯ್ಯ |
| ವಯಸ್ಸು | 58 |
| ಉದ್ಯೋಗ | ವ್ಯವಸಾಯ |
| ವಿಳಾಸ | ಅಣ್ಣೆಕೆಂಪಯ್ಯನದೊಡ್ಡಿ |

**ದಿನಾಂಕಃ 17.10.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** ಃ-

ಚಾಸಾ 1 ಮತ್ತು 4 ರವರು ಪರಿಚಯ ಇರುತ್ತಾರೆ. ಚಾಸಾ 2 ಮತ್ತು 3 ರವರು ಪರಿಚಯ ಇರುವುದಿಲ್ಲ. ಆರೋಪಿಗಳು ಗೊತ್ತು.

ಈಗ ಸಾಕ್ಷಿಗೆ ನಿಪಿ-3 ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-3(ಡಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಚಾಸಾ 4 ರವರ ಮನೆಯ ಬಳಿ 2017 ರಲ್ಲಿ ಮಾಡಿದ್ದು ದಿನಾಂಕ ನೆನಪು ಇರುವುದಿಲ್ಲ.2017 ರಲ್ಲಿ ಪೋಲಿಸರು ಮಹಜರ್ ಗೆ ಬಂದಿದ್ದರು ಆ ಸಮಯದಲ್ಲಿ ಪೋಲಿಸರ ಜೊತೆ ರಾಜಣ್ಣ ಮತ್ತು ಇನ್ನು ಇಬ್ಬರು ಇದ್ದರು ಅವರ ಹೆಸರು ಗೊತ್ತಿರುವುದಿಲ್ಲ. ಸದರಿ ಪೋಲಿಸರ ಜೊತೆ ಬಂದಿದ್ದವರನ್ನು ನೋಡಿದರೆ ಗುರುತಿಸುತ್ತೇನೆ. ಈ ಹಂತದಲ್ಲಿ 1 ನೇ ಆರೋಪಿ ಪರ ವಕೀಲರಿಂದ ಆರೋಪಿಯ ಗುರುತಿಸುವಿಕೆಗೆ ಯಾವುದೇ ತಕರಾರು ಇರುವುದಿಲ್ಲ. ಕಾಪರ್ ವೈಯರ್ ಅನ್ನು ಕಳ್ಳತನ ಮಾಡಿರುತ್ತಾರೆ ಎಂದು ಚಾಸಾ 4 ರವರ ಮನೆಯ ಬಳಿ ಬಂದಿದ್ದರು ಅಲ್ಲಿ ವೈಯರ್ ಅನ್ನು ತೋರಿಸಿರುತ್ತಾರೆ ಅಷ್ಟು ಮಾತ್ರ ಗೊತ್ತು ಬೇರೆ ಏನು ಗೊತ್ತಿರುವುದಿಲ್ಲ. ನನಗೆ ಚಾಸ 4 ಮತ್ತು 7 ರವರು ಮಾತ್ರ ಗೊತ್ತು. ಆ ಸಮಯದಲ್ಲಿ ಅವರು ಇದ್ದರು. ಸದರಿ ಕಾಪರ್ ವೈಯರ್ ಅನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ ಮುದ್ದೆಮಾಲು 1 ಅನ್ನು ತೋರಿಸಲಾಗಿ ನೋಡಿ ಗುರುತಿಸಿರುತ್ತಾರೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ವಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ವಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ**

ಃ-

ದಿನಾಂಕ 12.01.2017 ರಂದು ಸಂಜೆ 4.00 ರಿಂದ 5.00 ಗಂಟೆಯವರೆಗೆ ಪೋಲಿಸರು ಚಾಸಾ 4 ರವರ ಮನೆಯ ಬಳಿ ಆರೋಪಿಗಳಾದ ಗಿರೀಶ ಮತ್ತು ಶ್ರೀನಿವಾಸ ರವರನ್ನು ಪಂಚನಾಮೆಗೆ ಕರೆದುಕೊಂಡು ಬಂದಿದ್ದರು ಎಂದರೆ ಸಾಕ್ಷಿ ನನಗೆ ಚಾಸಾ4 ಮತ್ತು 7 ರವರು ಗೊತ್ತು ಆದರೆ ಉಳಿದವರನ್ನು ಗುರುತಿಸಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಗಳು ತಾವು ಕಳ್ಳತನ ಮಾಡಿದ್ದ ಮುದ್ದೆಮಾಲು 1 ಅನ್ನು ಚಾಸ 4 ರವರಿಗೆ ಕೊಟ್ಟಿರುತ್ತೇವೆ ಎಂದು ಹೇಳಿದದ್ದರು ಆ ಕಾರಣದಿಂದ ಚಾಸಾ 4 ರವರ ಮನೆ ಬಳಿ ಬಂದು ಮುದ್ದೆಮಾಲು 1 ಅನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಚಾಸಾ 4 ರವರು ಕೊಟ್ಟಿದ್ದು ನನಗೆ ಗೊತ್ತು ಆ ನಂತರ ಏನಾಯಿತು ಎಂದು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮಗೆ ಎಲ್ಲಾ ವಿಚಾರ ಗೊತ್ತಿದ್ದರೂ ಹಾಗೂ ಆರೋಪಿಗಳನ್ನು ನೀವು ನೋಡಿದ್ದರೂ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

**ಪಾಟೀ ಸವಾಲು** ಃ- **ಶ್ರೀಮತಿ. ಕೆ ಹೆಚ್ ಪಿ** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಮಹಜರ್ ನಲ್ಲಿ ಏನು ಬರೆದಿದೆ ಎಂದು ನಿಮಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಪೋಲಿಸರು ಸಹಿ ಹಾಕಲು ಹೇಳಿದ ಮೇರೆಗೆ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮುನಿಮುತ್ತಯ್ಯ ರವರ ಮನೆ ಬಳಿ ಮುದ್ದೆಮಾಲು 1ಅನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಮುನಿಮುತ್ತಯ್ಯ ರವರ ಬಳಿ ಮುದ್ದೆಮಾಲು 1 ಹೇಗೆ ಬಂದಿತ್ತು ಎಂದು ನಿಮಗೆ ಗೊತ್ತಿತ್ತೆ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಮುದ್ದೆಮಾಲು 1 ಮೋಟಾರ್ ರಿಪೇರಿ ಮಾಡುವವರ ಬಳಿ ಸಿಗುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈ ಪ್ರಕರಣದ ಬಗ್ಗೆ ನಿಮಗೆ ಯಾವುದೇ ಮಾಹಿತಿ ಇರದೇ ಇದ್ದರೂ ಪೋಲಿಸರ ಕೋರಿಕೆಯ ಮೇರೆಗೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**